ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 26 ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE: 19/11/20

# ನಿಗಮ ಸ್ಥಾಪನೆ ಪರ-ವಿರೋಧ ಕುರಿತು ಸಂಪುಟದಲ್ಲಿ ಪ್ರಸ್ತಾಪ

ಬೆಂಗಳೂರು: ಮರಾಠ ಅಭಿವೃದ್ಧಿ ಪ್ರಾಧಿಕಾರ ರಚನೆ, ವೀರಶೈವ -ಲಿಂಗಾಯತ ಅಭಿವೃದ್ಧಿ ನಿಗಮ ಸ್ಥಾಪನೆ ಆದೇಶ ಹಾಗೂ ಅದಕ್ಕೆ ಪರ ವಿರೋಧ ವ್ಯಕ್ತವಾಗುತ್ತಿರುವ ಬಗ್ಗೆ ಸಂಪುಟ ಸಭೆಯಲ್ಲಿ ಪ್ರಸ್ತಾಪವಾಗಿ ವಿವಾದ ಮಾಡಿಕೊಳ್ಳುವುದು ಬೇಡ ಎಂಬ ಅಭಿಪ್ರಾಯ ವ್ಯಕ್ತವಾಯಿತು ಎಂದು ಹೇಳಲಾಗಿದೆ. ಸಂಪುಟದ ಹಲವು ಸಚಿವರು ಈ ಕುರಿತು ಪ್ರಸ್ತಾಪಿಸಿ ಕನ್ನಡಪರ ಸಂಘಟನೆಗಳು ಮರಾಠ ಪ್ರಾಧಿಕಾರ ರಚನೆಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಹೀಗಾಗಿ, ಅದನ್ನು ನಿಗಮ ಎಂದು ಮಾಡಿ ಎಂದು ಸಲಹೆ ನೀಡಿದರು. ಹೀಗಾಗಿ, ತೀರ್ಮಾನ ಬದಲಿಸಲಾಯಿತು ಎನ್ನಲಾಗಿದೆ. ಅದೇ ರೀತಿ ವೀರಶೈವ-ಲಿಂಗಾಯಿತ ಅಭಿವೃದ್ಧಿ ನಿಗಮ ರಚನೆ ಆದೇಶ ಬೆನ್ನಲ್ಲೇ ಒಕ್ಕಲಿಗರು, ರೆಡ್ಡಿ ಸಮುದಾಯ ಸೇರಿ ಇತರೆ ಸಮುದಾಯಗಳು ನಿಗಮಕ್ಕೆ ಒತ್ತಾಯಿಸುತ್ತಿರುವ ಬಗ್ಗೆಯೂ ಚರ್ಚೆ ನಡೆಯಿತು. ಆದರೆ, ಇದನ್ನೇ ವಿವಾದ ಮಾಡಿಕೊಳ್ಳುವುದು ಬೇಡ. ಹೇಳಿಕೆ ಕೊಡುವಾಗ ಸಚಿವರು ಎಚ್ಚರವಹಿಸಿ ಎಂದು ಸೂಚನೆ ನೀಡಲಾಯಿತು ಎನ್ನಲಾಗಿದೆ.

> **“ಮರಾಠ ಸಮುದಾಯದ ಅಭಿವೃದ್ಧಿಗೆ ನಿಗಮ ಮಾಡಿದ್ದೇವೆ. ಭಾಷೆಯ ಆಧಾರದಲ್ಲಿ ಮಾಡಿಲ್ಲ. ಕುರುಬ ಸಮುದಾಯದ ಅಭಿವೃದ್ಧಿ ನಿಗಮಕ್ಕೆ ನಾನು ಒತ್ತಾಯಿಸುವುದಿಲ್ಲ. ಆದರೆ, ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬ ಹೋರಾಟಕ್ಕೆ ನನ್ನ ಬೆಂಬಲವಿದೆ.**
>
> • **ಕೆ.ಎಸ್. ಈಶ್ವರಪ್ಪ,** ಸಚಿವ